**<u>ದಿನಾಂಕಃ 15-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ ಶ್ರೀ ಪಿ.ಎನ್.ಎ. ಆರೋಪಿ ಪರ ವಕೀಲರಿಂದಃ</u>**

**15.** ನಿಪಿ-6 ರಿಂದ ನಿಪಿ-11 ರ ದಾಖಲೆಗಳು ವೀರುಪಾಕ್ಷಪ್ಪ ತಳಮನಿ ಇವರಿಗೆ ಸಂಬಂಧಿಸಿದ ಆಸ್ತಿಗಳು ಅಂದರೆ, ಪಿತ್ರಾರ್ಜಿತ ಆಸ್ತಿಗಳು ಇರುತ್ತವೆ ಅಂತಾ ಹೇಳುತ್ತಾರೆ. ನಾನು ಹಾಜರಪಡಿಸಿದ ಪಹಣಿ ಪತ್ರಿಕೆಗಳಲ್ಲಿ ಹಾಗೂ ವಿದ್ಯುತ್ತಚ್ಛಕ್ತಿ ಬಿಲ್‌ನಲ್ಲಿ, ಸಿಟಿಎಸ್ ಉತಾರಗಳಲ್ಲಿ ಹಾಗೂ ಅಪಸಾತ್ ವಾಟಣಿಗಳಲ್ಲಿ ನನ್ನ ಹೆಸರು ಇರುವುದಿಲ್ಲ ಅಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ನನಗೆ ಆಸ್ತಿಗಳಲ್ಲಿ ಹಕ್ಕು ಇದ್ದ ಬಗ್ಗೆ ಬರೆದಿಲ್ಲ. ನಾನು ಪಿತ್ರಾರ್ಜಿತ ಆಸ್ತಿಗಳಲ್ಲಿ ಹಿಸ್ಸೆ ಕೇಳಿ ದಾವೆ ಮಾಡಿಲ್ಲ. ನಿಪಿ-6 ರಿಂದ ನಿಪಿ-10 ರ ದಾಖಲೆಗಳು ನನಗೆ ಯಾವುದೇ ರೀತಿಯಿಂದ ಸಂಬಂಧಪಟ್ಟಿಲ್ಲ ಆದರೂ ಕೂಡಾ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

**16.** ನಿಪಿ-11 ರಿಂದ ನಿಪಿ-14 ರ ದಾಖಲೆಗಳ ಪ್ರಕಾರ ವಿನಯ ಮೇಡಿಕಲ್ಸ ನನಗೆ ಸಂಬಂಧಿಸಿಲ್ಲ ಅಂದರೆ ಸುಳ್ಳು. ಸದರಿ ಅಂಗಡಿಯು ಸರೋಜಾ ಮುದ್ದಿ ಇವರಿಗೆ ಸಂಬಂಧಪಟ್ಟಿದ್ದು ಇರುತ್ತದೆ ಅಂದರೆ ಸರಿಯಲ್ಲ. ನಿಪಿ-11 ರಿಂದ ನಿಪಿ-14 ರ ದಾಖಲೆಗಳಲ್ಲಿ ಸರೋಜಾ ಮುದ್ದಿ ಇವರ ಹೆಸರು ಇರುತ್ತದೆ ಅಂದರೆ ಸರಿ, ಅವರು ಇದೇ ಊರಿನಲ್ಲಿ ಇರುತ್ತಾರೆ. ದಿನಾಂಕಃ 12-02-2021 ರಂದು ಪಾಟೀ ಸವಾಲು ಮಾಡಿದಾಗ ಅದರ ಆಧಾರದ ಮೇಲೆ ಸದರಿ ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ವಿನಯ ಮೇಡಿಕಲ್ ನಡೆಸುವುದಿಲ್ಲ, ಸರೋಜಾ ಮುದ್ದಿಯವರು ಅದರ

ಮಾಲೀಕರಿದ್ದು ಅನುಕೂಲವಾಗಲೀ ಅಂತಾ ಅವರ ಕಡೆಯಿಂದ ದಾಖಲೆಗಳನ್ನು ಸೃಷ್ಠಿಸಿ ಹಾಜರುಪಡಿಸಿರುತ್ತೇನೆ ಅಂದರೆ ಸರಿಯಲ್ಲ.

**17**. ನನ್ನೊಂದಿಗೆ ಆರೋಪಿ ದ್ವಿತೀಯ ಪಿಯುಸಿಯ ಕಾಲದಲ್ಲಿ ಶಿಕ್ಷಣ ಪಡೆದ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ. ನಾನು ಹಾಗೂ ಆರೋಪಿ ಒಂದೇ ಕಾಲೇಜಿನಲ್ಲಿ ಶಿಕ್ಷಣ ಪಡೆಯುತ್ತಿದ್ದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ. ಆರೋಪಿ ಹಾಗೂ ನಾನು ಒಂದೇ ಕಾಲೇಜನಲ್ಲಿ ಶಿಕ್ಷಣ ಪಡೆದಿಲ್ಲ, ಈಗ ಮೊದಲ ಬಾರಿಗೆ ಆ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**18.** ನಿಪಿ-16 ರ ಸ್ಟೇಟ್‌ಮೆಂಟ್‌ನಲ್ಲಿ ತೋರಿಸಿದ ಸಾಲವನ್ನು ನನ್ನ ವ್ಯಾಪಾರದ ಕುರಿತು ಪಡೆದಿರುತ್ತೇನೆ. ನಾನು ಸಾಲದ ಅರ್ಜಿ ಹಾಗೂ ಸಾಲದ ಅಗ್ರಿಮೆಂಟ್ ನ್ಯಾಯಾಲಯದ ಮುಂದೆ ಹಾಜರಪಡಿಸಿಲ್ಲ. ನಾನು ಬ್ಯುಸಿನೆಸ್ ಲೋನ ಪಡೆದಿದ್ದೆ. ನಾನು ಸಾಲ ಪಡೆದ ಹಾಗೆ ಯಾವುದೇ ಬ್ಯುಸಿನೆಸ್ ನಡೆಸಿಲ್ಲ. ನಾನು ಹಾಗೂ ಬ್ಯಾಂಕಿನವರು ಶಾಮೀಲಾಗಿ ಚೆಕ್‌ನಲ್ಲಿರುವ ದಿನಾಂಕಕ್ಕೆ ಹೊಂದಾಣಿಕೆಯಾಗುವಂತೆ ದಾಖಲೆಗಳನ್ನು ಸೃಷ್ಠಿಸಿ ಸಾಲದ ಸುಳ್ಳು ದಾಖಲಾತಿ ತಯಾರಿಸಿರುತ್ತೇನೆ ಅಂದರೆ ಸರಿಯಲ್ಲ. ನಾನು ಸಾಲ ಪಡೆದ ರೂ. 4,00,000/- ಗಳನ್ನು ಎರಡು ಕಂತುಗಳಲ್ಲಿ ಡ್ರಾ ಮಾಡಿರುತ್ತೇನೆ. ನಾನು ದಿನಾಂಕಃ 07-02-2019 ರಂದು ರೂ. 2 ಲಕ್ಷ ಸಮೀಪ ಹಣ ಡ್ರಾ ಮಾಡಿರುತ್ತೇನೆ. ಅದಕ್ಕಿಂತ ಮುಂಚೆ ಒಂದು ಬಾರಿ 2 ಲಕ್ಷ ಹಣ ಡ್ರಾ ಮಾಡಿರುತ್ತೇನೆ, ದಿನಾಂಕ ನೆನಪಿಲ್ಲ. ನಾನು ಹೇಳಿದಂತೆ ಈ ದಿನಾಂಕಗಳಂದು ಬ್ಯಾಂಕಿನಿಂದ ಹಣ ಡ್ರಾ ಮಾಡಿಲ್ಲ ಹಾಗೂ ಆರೋಪಿಗೆ ಸಹ ನೀಡಿಲ್ಲ ಅಂದರೆ ಸುಳ್ಳು. ಸಾಲವನ್ನು ನನ್ನ ವೈಯಕ್ತಿಕ ಕಾರಣಕ್ಕೆ ಬಳಸಿಕೊಂಡು ಅದರಲ್ಲಿ ಬರೆದಿರುವ ದಿನಾಂಕಗಳು ತಾಳೆಯಾಗುತ್ತವೆ ಅಂತಾ ಆರೋಪಿಗೆ ಹಣ ನೀಡದೇ ಇದ್ದರೂ ಸುಳ್ಳು ಪ್ರಕರಣ ದಾಖಲೆಸಿರುತ್ತೇನೆ ಅಂದರೆ ಸರಿಯಲ್ಲ.

**19.** ನಿಪಿ-18 ರ ದಾಖಲೆಯು ಆ ಬ್ಯಾಂಕಿನಲ್ಲಿ ವ್ಯವಹಾರ ಇದ್ದ ಬಗ್ಗೆ ತೋರಿಸಲು ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಯಲ್ಲಿ ರಮ್ಮಿ ಗೇಮ್‌ಗೆ ಹಣ ನೀಡಿದ ಬಗ್ಗೆ ದಾಖಲೆ ಇರುತ್ತದೆ ಅಂದರೆ ಸಾಕಷ್ಟು ವ್ಯವಹಾರಗಳು ಇರುತ್ತವೆ ಅಂತಾ ಹೇಳುತ್ತಾರೆ. ನಿಪಿ-18 ಆರೋಪಿಗೆ ಹಣ ನೀಡಿದ ಬಗ್ಗೆ ದಾಖಲೆ ಇರುವುದಿಲ್ಲ, ಅದೇ ರೀತಿ ಆರೋಪಿಗೆ ಹಣ ನೀಡುವಷ್ಟು ಆರ್ಥಿಕ ಶಕ್ತಿ ಇದ್ದ ಬಗ್ಗೆ ಸಹ ಅದರಿಂದ ಗೊತ್ತಾಗುವುದಿಲ್ಲ ಅಂದರೆ ಸುಳ್ಳು.

**20.** ನಾನು ನಾಗೇಂದ್ರನಮಟ್ಟಿಯಲ್ಲಿ ಅಂಗಡಿ ಇಟ್ಟ ಬಗ್ಗೆ ದಾಖಲೆ ಹಾಜರಪಡಿಸಿರುತ್ತೇನೆ. ಆರೋಪಿ ನಾಗೇಂದ್ರನಮಟ್ಟಿಯಲ್ಲಿ ವಾಸ ಇದ್ದ ಬಗ್ಗೆ ದಾಖಲೆ ಹಾಜರಪಡಿಸಿದ್ದೀರಾ ಅಂದರೆ ಸಾಕ್ಷಿ ಆತನಿಗೆ ಪೋಸ್ಟ ನೀಡಿರುತ್ತೇವೆ ಅಂತಾ ಹೇಳುತ್ತಾರೆ. ಆರೋಪಿ ಮುಂಚೆ ನಾಗೇಂದ್ರನಮಟ್ಟಿಯಲ್ಲಿ ಸರ್ಕಾರಿ ಕನ್ನಡ ಶಾಲೆಯ ಹಿಂದುಗಡೆ ಸ್ವಂತ ಮನೆಯಲ್ಲಿ ಇದ್ದ, ನಂತರ ಮೇನ ರೋಡಲ್ಲಿರುವ ಕಿರಾಣಿ ಅಂಗಡಿ ಹತ್ತಿರ ಮನೆ ಭಾಡಿಗೆ ಮಾಡಿ ಇದ್ದ. ನಾನು ಆರೋಪಿಯ ಸ್ವಂತ ಮನೆ ನೋಡಿದ್ದೆ. ನಾನು ಹೇಳಿದಂತೆ ಆರೋಪಿ ಮೊದಲು ಸ್ವಂತ ಮನೆ ಇದ್ದು, ಹಾಗೂ ನಂತರ ಭಾಡಿಗೆ ಮನೆಯಲ್ಲಿ ಇದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಯಾರ ಮನೆಯಲ್ಲಿ ಭಾಡಿಗೆ ಇದ್ದ ಮಾಲೀಕರ ಹೆಸರು ಕುಂಬಾರ ಅಂತಾ ಇರುತ್ತದೆ. ನಾಗೇಂದ್ರನಮಟ್ಟಿಯಲ್ಲಿ ಕುಂಬಾರ ಇವರ ಮನೆ ಇರುವುದಿಲ್ಲ, ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿ ಆ ವಿಳಾಸದಲ್ಲಿ ಇಲ್ಲದೇ ಇದ್ದರೂ ಸಹ ಅಲ್ಲಿಗೆ ನೋಟಿಸ್ ಕಳುಹಿಸಿದ್ದರಿಂದ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ನೋಟಿಸ್ ವಾಪಸ್ಸ ಬಂದಿತ್ತು. ಆರೋಪಿಯ ಸರಿಯಾದ ವಿಳಾಸಕ್ಕೆ ನೋಟಿಸ್ ಕಳುಹಿಸಿದರೆ ನಿಜವಾದ

ಸಂಗತಿಗಳು ಗೊತ್ತಾಗುತ್ತವೆ ಹಾಗೂ ಚಂದ್ರಶೇಖರ ಹತ್ತಿ ಇವರು ನೀಡಿದ ನೋಟಿಸ್ ಬಗ್ಗೆ ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ಆರೋಪಿಯ ತಪ್ಪು ವಿಳಾಸಕ್ಕೆ ನೋಟಿಸ್ ನೀಡಿರುತ್ತೇನೆ ಅಂದರೆ ಸರಿಯಲ್ಲ.

**21.** ಚೆಕ್‌ನಲ್ಲಿ ನಮೂದಿಸಿದ ಹಣವನ್ನು ಆರೋಪಿಗೆ ನೀಡುವಷ್ಟು ಆದಾಯದ ಮೂಲ ನನ್ನ ಬಳಿ ಇರುವುದಿಲ್ಲ ಅಂದರೆ ಸುಳ್ಳು. ಚಂದ್ರಶೇಖರ ಹತ್ತಿ ಇವರ ಮಾತುಕೇಳಿ ಆರೋಪಿಯ ವಿರುದ್ಧ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಮನೆ ಕಟ್ಟುವ ಕುರಿತು ಹಣ ಕೇಳಿದ್ದ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗೆ ದೂರು ನೀಡುವ ಮೊದಲು ಯಾವುದೇ ನೋಟಿಸ್ ನೀಡಿಲ್ಲ ಆದರೂ ಕೂಡಾ ಅದು ಜಾರಿಯಾಗಿಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ-5 ರಲ್ಲಿ ನಮೂದಿಸಿದ ವಿಳಾಸದಲ್ಲಿ ಆರೋಪಿ ಯಾವ ಕಾಲದಲ್ಲಿಯೂ ವಾಸವಿರಲಿಲ್ಲ ಅಂದರೆ ಸುಳ್ಳು. ಆರೋಪಿಯಿಂದ ಅನ್ಯಾಯದ ದುಡ್ಡನ್ನು ಪಡೆಯಬೇಕು ಅಂತಾ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಅಂದರೆ ಸರಿಯಲ್ಲ. ಆರೋಪಿ ಸಿಎಂಸಿಗೆ 4ನೇ ವಾರ್ಡನಿಂದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ 2 ಬಾರಿ ಆಯ್ಕೆಯಾಗಿದ್ದ ಅಂದರೆ ಸರಿ. ನಾನು ಬಿಜೆಪಿ ಪಕ್ಷದ ಕಾರ್ಯಕರ್ತ ಅಂದರೆ ಸರಿ.

**ಮರು ವಿಚಾರಣೆ ಇರುವುದಿಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.